**ಕರ್ನಾಟಕ ವಿಧಾನಸಭೆ**
**ಹದಿನೈದನೇ ವಿಧಾನಸಭೆ**
**ಹದಿಮೂರನೇ ಅಧಿವೇಶನ**

# ಕರ್ನಾಟಕ ರೇಷ್ಮೆಹುಳುಬಿತ್ತನೆ, ರೇಷ್ಮೆಗೂಡು ಮತ್ತು ರೇಷ್ಮೆನೂಲು (ಉತ್ಪಾದನೆ, ಸರಬರಾಜು, ವಿತರಣೆ ಮತ್ತು ಮಾರಾಟ ವಿನಿಯಮನ) (ತಿದ್ದುಪಡಿ) ವಿಧೇಯಕ, 2022

**(2022ರ ವಿಧಾನಸಭೆಯ ವಿಧೇಯಕ ಸಂಖ್ಯೆ–17)**

ಕರ್ನಾಟಕ ರೇಷ್ಮೆಹುಳು ಬಿತ್ತನೆ, ರೇಷ್ಮೆಗೂಡು ಮತ್ತು ರೇಷ್ಮೆನೂಲು (ಉತ್ಪಾದನೆ, ಸರಬರಾಜು, ವಿತರಣೆ ಮತ್ತು ಮಾರಾಟ ವಿನಿಯಮನ) ಅಧಿನಿಯಮ, 1959ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ರೇಷ್ಮೆಹುಳುಬಿತ್ತನೆ, ರೇಷ್ಮೆಗೂಡು ಮತ್ತು ರೇಷ್ಮೆನೂಲು (ಉತ್ಪಾದನೆ, ಸರಬರಾಜು, ವಿತರಣೆ ಮತ್ತು ಮಾರಾಟ ವಿನಿಯಮನ) ಅಧಿನಿಯಮ, 1959ನ್ನು (1960ರ ಕರ್ನಾಟಕ ಅಧಿನಿಯಮ 5) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ರೇಷ್ಮೆಹುಳು ಬಿತ್ತನೆ, ರೇಷ್ಮೆಗೂಡು ಮತ್ತು ರೇಷ್ಮೆನೂಲು (ಉತ್ಪಾದನೆ, ಸರಬರಾಜು, ವಿತರಣೆ ಮತ್ತು ಮಾರಾಟ ವಿನಿಯಮನ) (ತಿದ್ದುಪಡಿ) ಅಧಿನಿಯಮ, 2022ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 10ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ರೇಷ್ಮೆಹುಳು ಬಿತ್ತನೆ, ರೇಷ್ಮೆಗೂಡು ಮತ್ತು ರೇಷ್ಮೆನೂಲು (ಉತ್ಪಾದನೆ, ಸರಬರಾಜು, ವಿತರಣೆ ಮತ್ತು ಮಾರಾಟ ವಿನಿಯಮನ) ಅಧಿನಿಯಮ, 1959ರ (1960ರ ಕರ್ನಾಟಕ ಅಧಿನಿಯಮ ಸಂಖ್ಯೆ 5) 10ನೇ ಪ್ರಕರಣದಲ್ಲಿ,-

(i) ಶೀರ್ಷಿಕೆಯಲ್ಲಿ "ರೇಷ್ಮೆ ಹುಳು ಬಿತ್ತನೆಯ" ಎಂಬ ಪದಗಳ ಬದಲಿಗೆ "ರೇಷ್ಮೆಗೂಡಿನ ಮಾರುಕಟ್ಟೆಗಳಲ್ಲಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) (2)ನೇ ಉಪಪ್ರಕರಣದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(2) ರೇಷ್ಮೆಗೂಡಿನ ಮಾರುಕಟ್ಟೆಯಲ್ಲಿ ರೇಷ್ಮೆಗೂಡುಗಳ ಮಾರಾಟ ಅಥವಾ ಖರೀದಿಯನ್ನೊಳಗೊಂಡ ಎಲ್ಲಾ ವ್ಯವಹಾರಗಳನ್ನು ಬಹಿರಂಗ ಹರಾಜಿನ ಮೂಲಕ ಅಥವಾ ಇ-ಹರಾಜಿನ ಮೂಲಕ ನಿಯಮಿಸಬಹುದಾದಂಥ ರೀತಿಯಲ್ಲಿ ನಡೆಸತಕ್ಕದ್ದು, ಮಾರಾಟದ ಬೆಲೆಯು ನಗದು ರೂಪದಲ್ಲಿ ಅಥವಾ ವಿದ್ಯುನ್ಮಾನ ತೀರಿಕೆ ವ್ಯವಸ್ಥೆ (ಇಸಿಎಸ್) ಅಥವಾ ನೈಜ ಸಮಯ ನಿವ್ವಳ ತೀರುವಳಿ (ಆರ್‌ಟಿಜಿಎಸ್) ಅಥವಾ ರಾಷ್ಟ್ರೀಯ ವಿದ್ಯುನ್ಮಾನ ನಿಧಿ ವರ್ಗಾವಣೆ (ಎನ್‌ಇಎಫ್‌ಟಿ) ಮೂಲಕ ಸಂದಾಯವಾಗತಕ್ಕದ್ದು ಮತ್ತು ರೇಷ್ಮೆಗೂಡುಗಳನ್ನು ಕಾನೂನು ಮಾಪನ ಅಧಿನಿಯಮ, 2009ರ (2009ರ ಕೇಂದ್ರ ಅಧಿನಿಯಮ 1) ಮತ್ತು ಅದರಡಿಯಲ್ಲಿ ರಚಿಸಿದ ನಿಯಮಗಳ ಮೂಲಕ ಅಥವಾ ಅದರಡಿಯಲ್ಲಿ ಅಗತ್ಯಪಡಿಸಲಾದಂತೆ ತೂಕದ ಮುಖೇನ ಮಾರಾಟ ಮಾಡತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ರೇಷ್ಮೆಗೂಡಿನ ಮಾರುಕಟ್ಟೆಯಲ್ಲಿ ರೇಷ್ಮೆಗೂಡುಗಳ ಮಾರಾಟ ಅಥವಾ ಖರೀದಿಯನ್ನೊಳಗೊಂಡ ಎಲ್ಲಾ ವ್ಯವಹಾರಗಳನ್ನು ಬಹಿರಂಗ ಹರಾಜಿನ ಮೂಲಕ ಅಥವಾ ಇ-ಹರಾಜಿನ ಮೂಲಕ ಮತ್ತು ಮಾರಾಟದ ಬೆಲೆಯು ನಗದು ರೂಪದಲ್ಲಿ ಅಥವಾ ವಿದ್ಯುನ್ಮಾನ ತೀರಿಕೆ ವ್ಯವಸ್ಥೆ (ಇಸಿಎಸ್) ಅಥವಾ ನೈಜ ಸಮಯ ನಿವ್ವಳ ತೀರುವಳಿ (ಆರ್‌ಟಿಜಿಎಸ್) ಅಥವಾ ರಾಷ್ಟ್ರೀಯ ವಿದ್ಯುನ್ಮಾನ ನಿಧಿ ವರ್ಗಾವಣೆ (ಎನ್‌ಇಎಫ್‌ಟಿ) ಮುಂತಾದವುಗಳ ಮೂಲಕ ಪಾವತಿ ಮಾಡುವುದನ್ನು ಉಪಬಂಧಿಸಲು, ಕರ್ನಾಟಕ ರೇಷ್ಮೆಹುಳು ಬಿತ್ತನೆ, ರೇಷ್ಮೆಗೂಡು ಮತ್ತು ರೇಷ್ಮೆನೂಲು (ಉತ್ಪಾದನೆ, ಸರಬರಾಜು, ವಿತರಣೆ ಮತ್ತು ಮಾರಾಟ ವಿನಿಯಮನ) ಅಧಿನಿಯಮ, 1959ನ್ನು (1960ರ ಕರ್ನಾಟಕ ಅಧಿನಿಯಮ ಸಂಖ್ಯೆ 5) ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ.

ಆದ್ದರಿಂದ, ಈ ವಿಧೇಯಕ.

# ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

## ಪ್ರತ್ಯಾಯೋಜಿತ ಶಾಸನ ರಚನಾಧಿಕಾರದ ಕುರಿತು ಜ್ಞಾಪನ ಪತ್ರ

| | |
|---|---|
| **ಖಂಡ 02:** | 10ನೇ ಪ್ರಕರಣದ (2)ನೇ ಉಪಪ್ರಕರಣದ ಮೂಲಕ ಪ್ರತಿಯೋಜಿಸಲು ಉದ್ದೇಶಿಸಿರುವ (ii)ನೇ ಉಪಖಂಡವು, ಬಹಿರಂಗ ಹರಾಜು ಅಥವಾ ಇ-ಹರಾಜು ವಿಧಾನದ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

**ಡಾ. ನಾರಾಯಣಗೌಡ**
ರೇಷ್ಮೆ, ಯುವ ಸಬಲೀಕರಣ ಮತ್ತು
ಕ್ರೀಡಾ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

## ಅನುಬಂಧ

## ಕರ್ನಾಟಕ ರೇಷ್ಮೆಹುಳುಬಿತ್ತನೆ, ರೇಷ್ಮೆಗೂಡು ಮತ್ತು ರೇಷ್ಮೆನೂಲು (ಉತ್ಪಾದನೆ, ಸರಬರಾಜು, ವಿತರಣೆ ಮತ್ತು ಮಾರಾಟ ವಿನಿಯಮನ) ಅಧಿನಿಯಮ, 1959ರ (1960ರ ಕರ್ನಾಟಕ ಅಧಿನಿಯಮ ಸಂಖ್ಯೆ 5) ಉದ್ಧೃತ ಭಾಗ

**X X XX XX**

**10. ರೇಷ್ಮೆ ಹುಳು ಬಿತ್ತನೆಯ ವಿನಿಯಮನ ಮತ್ತು ವಿತರಣೆ.-** (1) ಸರ್ಕಾರವು, ಕಾಲಕಾಲಕ್ಕೆ ಅಧಿಸೂಚನೆ ಮೂಲಕ,-

(ಎ) ರೇಷ್ಮೆಗೂಡು ಮಾರುಕಟ್ಟೆಗಳು, ರೇಷ್ಮೆಗೂಡಿನ ಮಾರುಕಟ್ಟೆ ಪ್ರಾಂಗಣಗಳು ಮತ್ತು ರೇಷ್ಮೆಗೂಡಿನ ಉಗ್ರಾಣಗಳು ಇರತಕ್ಕ ಸ್ಥಳಗಳನ್ನು ನಿರ್ದಿಷ್ಟಪಡಿಸಬಹುದು;

(ಬಿ) ಮಾರುಕಟ್ಟೆ ಅಧಿಕಾರಿಯನ್ನು ರೇಷ್ಮೆಗೂಡು ಮಾರುಕಟ್ಟೆಯಲ್ಲಿ ಮಾರಾಟ ಮಾಡಿದ ಅಥವಾ ಖರೀದಿಸಿದ ರೇಷ್ಮೆಗೂಡುಗಳ ಸಂಬಂಧದಲ್ಲಿ ಈ ಅಧಿನಿಯಮದ ಮೇರೆಗೆ ಸಂದಾಯವಾಗತಕ್ಕ ಮಾರುಕಟ್ಟೆ ಶುಲ್ಕವನ್ನು ವಿಧಿಸಿ ವಸೂಲು ಮಾಡಲುನೇಮಕ ಮಾಡಬಹುದು ಮತ್ತು ರೇಷ್ಮೆಗೂಡಿನ ಮಾರುಕಟ್ಟೆಯಲ್ಲಿ ವ್ಯವಹಾರವನ್ನು ನಡೆಸುವ ವಿಧಾನವನ್ನು ಸಾಮಾನ್ಯವಾಗಿ ವಿನಿಯಮಿಸುವುದಕ್ಕಾಗಿ ಮತ್ತು ಸರ್ಕಾರವು ನಿರ್ಧರಿಸಬಹುದಾದಂಥ ಪ್ರಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ಮಾರುಕಟ್ಟೆ ಅಧಿಕಾರಿಯು ಆಧ್ಯಕ್ಷನಾಗಿರತಕ್ಕ ಮತ್ತು ರೇಷ್ಮೆ ಹುಳು ಸಾಕಣೆದಾರರ ಇಬ್ಬರು ಪ್ರತಿನಿಧಿಗಳನ್ನು ಮತ್ತು ನೂಲು ಬಿಚ್ಚುವವರ ಮೂವರು ಪ್ರತಿನಿಧಿಗಳನ್ನುಒಳಗೊಂಡ ಒಂದು ಸಮಿತಿಯನ್ನು ರಚಿಸಬಹುದು;

(ಸಿ) ರಾಜ್ಯದಲ್ಲಿರುವ ಯಾವ ರೇಷ್ಮೆ ಕೃಷಿ ಪ್ರದೇಶಗಳು ಪ್ರತಿಯೊಂದು ರೇಷ್ಮೆ ಬಿತ್ತನೆ ಮಾರುಕಟ್ಟೆಯ ಸೇವೆಯನ್ನು ಪಡೆಯತಕ್ಕದ್ದೋ ಮತ್ತು ಆ ಯಾವ ಪ್ರದೇಶಗಳಲ್ಲಿ ಉತ್ಪಾದನೆಯಾದಂಥ ರೇಷ್ಮೆ ಹುಳು ಬಿತ್ತನೆ ಬೀಜಗಳನ್ನು ಮಾರಾಟ ಮಾಡತಕ್ಕದ್ದೋ ಅಂಥ ಪ್ರದೇಶಗಳನ್ನು ನಿರ್ದಿಷ್ಟಪಡಿಸತಕ್ಕದ್ದು;

(ಡಿ) ಲೈಸೆನ್ಸು ಪಡೆದ ಯಾವನೇ ನೂಲು ಬಿಚ್ಚುವವನು ತನ್ನ ವ್ಯವಹಾರಗಳನ್ನು ನಡೆಸಬಹುದಾದಂಥ ವಲಯಗಳನ್ನು ಮತ್ತು ಮಾರುಕಟ್ಟೆಗಳನ್ನು ಗೊತ್ತುಪಡಿಸಬಹುದು.

(2) ರೇಷ್ಮೆಗೂಡಿನ ಮಾರುಕಟ್ಟೆಯಲ್ಲಿ ಗೂಡುಗಳ ಮಾರಾಟ ಅಥವಾ ಖರೀದಿಯನ್ನೊಳಗೊಂಡ ಎಲ್ಲಾ ವ್ಯವಹಾರಗಳನ್ನು ಬಹಿರಂಗ ಹರಾಜಿನ ಮೂಲಕ ನಡೆಸತಕ್ಕದ್ದು, ಮಾರಾಟದ ಬೆಲೆಯು ನಗದು ರೂಪದಲ್ಲಿ ಸಂದಾಯವಾಗತಕ್ಕದ್ದು ಮತ್ತು ಗೂಡುಗಳನ್ನು ಕರ್ನಾಟಕ ತೂಕ ಮತ್ತು ಅಳತೆಗಳ (ಜಾರಿ) ಅಧಿನಿಯಮ, 1958ರ ಮೂಲಕ ಅಥವಾ ಮೇರೆಗೆ ಅಗತ್ಯಪಡಿಸಲಾದಂತೆ ತೂಕದ ಮೂಲಕ ಮಾರಾಟ ಮಾಡತಕ್ಕದ್ದು.

**X X XX XX**

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು, ಪಿ7, ಕಾಸೂ 376, ಪ್ರತಿಗಳು 500, 7ನೇ ಸೆಪ್ಟೆಂಬರ್, 2022

KARNATAKA LEGISLATIVE ASSEMBLY
FIFTEENTH LEGISLATIVE ASSEMBLY
THIRTEENTH SESSION

# THE KARNATAKA SILKWORM SEED, COCOON AND SILK YARN (REGULATION OF PRODUCTION, SUPPLY, DISTRIBUTION AND SALE) (AMENDMENT) BILL, 2022

**(LA Bill No. 17 of 2022)**

A Bill further to amend the Karnataka Silkworm Seed, Cocoon and Silk Yarn (Regulation of Production, Supply, Distribution and Sale) Act, 1959.

Whereas it is expedient further to amend the Karnataka Silkworm Seed, Cocoon and Silk Yarn (Regulation of Production, Supply, Distribution and Sale) Act, 1959 (Karnataka Act 5 of 1960) for the purposes hereinafter appearing;

Be it enacted by the Karnataka State Legislature in the seventy third year of the Republic of India, as follows:-

**1. Short title and commencement.-** (1) This Act may be called the Karnataka Silkworm Seed, Cocoon and Silk Yarn (Regulation of Production, Supply, Distribution and Sale) (Amendment) Act, 2022.

(2) It shall come into force at once.

**2. Amendment of section 10.-** In section 10 of the Karnataka Silkworm Seed, Cocoon and Silk Yarn (Regulation of Production, Supply, Distribution and Sale) Act, 1959 (Karnataka Act 5 of 1960),-

(i) in the heading, for the words "of silkworm seed", the words "in the cocoon markets" shall be substituted;

(ii) for sub-section (2) the following shall be substituted, namely:-

"(2) All transactions involving the sale or purchase of cocoons in a cocoon market shall be by open auction or by e-auction in such manner as may be prescribed, the payment of the price shall be in cash or through electronic clearing system (ECS) or Real Time Gross settlement (RTGS) or National Electronic Fund Transfer (NEFT) as may be specified by State Government and the cocoons shall be sold by weight, as required by or under the Legal Metrology Act, 2009. (Central Act 1 of 2009) and rules made thereunder."

**STATEMENT OF OBJECTS AND REASONS**

It is considered necessary to amend the Karnataka Silkworm Seed, Cocoon and Silk Yarn (Regulation of Production, Supply, Distribution and Sale) Act, 1959 (Karnataka Act 5 of 1960), to provide for all transactions involving the sale or purchase of cocoons in a cocoon market by open auction or by e-auction and to make payment of price in cash or through electronic clearing system (ECS) or Real Time Gross settlement (RTGS) or National Electronic Fund Transfer (NEFT) etc.,

Hence, the Bill.

## FINANCIAL MEMORANDUM

There is no extra expenditure involved in the proposed legislative measure.

**MEMORANDUM REGARDING DELEGATED LEGISLATION**

| | |
|---|---|
| **Clause 02:** | Sub-clause (ii), sub section (2) of section (10) proposed to be substituted empowers the State Government to make rules regarding the manner of open auction or e-auction. |

The proposed delegation of Legislative power is normal in character.

**Dr. NARAYANAGOWDA**
Minister for Sericulture, Youth
Empowerment and Sports

**M.K. VISHALAKSHI**
Secretary
Karnataka Legislative Assembly

**ANNEXURE**

**EXTRACT FROM THE KARNATAKA SILKWORM SEED, COCOON AND SILK YARN (REGULATION OF PRODUCTION, SUPPLY, DISTRIBUTION AND SALE) ACT, 1959 (KARNATAKA ACT 5 OF 1960)**

**XXX XXX XXX**

**10. Regulation and distribution of silkworm seed.-** (1) The Government may, from time to time, by notification,

(a) specify the places at which cocoon markets, cocoon market yards and cocoon stores shall be located;

(b) appoint a Market Officer to levy and collect the market fee payable under this Act in respect of cocoons sold or purchased in the cocoon market, and constitute a committee consisting of two representatives of rearers, and three representatives of reelers , with the Market Officer as Chairman, for regulating generally the procedure for the conduct of business in the cocoon market and for the performance of such functions as may be determined by the Government;

(c) specify the sericultural areas in the State to be served by each cocoon market where silkworm cocoon produced within such areas shall be sold;

(d) assign zones and markets in which any reeler may carry on his business.

(2) All transactions involving the sale or purchase of cocoons in a cocoon market shall be by open auction, the payment of the price shall be in cash and the cocoons shall be sold by weight, as required by or under the Karnataka Weights and Measures (Enforcement) Act, 1958.

**XXX XXX XXX**

Govt. Press, Vikasa Soudha, Bengaluru, 07th Sept, 2022, P7, W.D. 352, Copies 500